ಸ್ನಾತಕೋತ್ತರ ಕೇಂದ್ರದಲ್ಲಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕಿ ಆಗಿದ್ದೇನೆ.

**◆ ಮುತ್ತು ಕಟ್ಟಿಸಿಕೊಳ್ಳುವ ವಿಧಿ ವಿಧಾನ ಹೇಗಿತ್ತು?**

ಮುತ್ತು ಕಟ್ಟಿಸಿಕೊಳ್ಳುವ ಅಥವಾ ಜೋಗತಿ ದೀಕ್ಷೆ ತೆಗೆದುಕೊಳ್ಳುವ ಕ್ರಿಯೆಗೆ ಅದರದ್ದೇ ಆದ ಜನಪದೀಯ ಸಾಂಪ್ರದಾಯಿಕ ಆಚರಣೆಗಳಿವೆ. ಮದುವೆಯ ಸಂಭ್ರಮದಂತೆಯೇ ಆ ಸನ್ನಿವೇಶ ಇರುತ್ತದೆ. ನಾನು ದೀಕ್ಷೆ ಪಡೆಯುವ ಸಂದರ್ಭದಲ್ಲಿ, ಮನೆ ಮುಂದೆ ಹಂದರವನ್ನು ಹಾಕಿ ಅಲಂಕಾರ ಮಾಡಿದ್ದರು. ನನಗೆ ಬಳೆ ತೊಡಿಸಿ, ಅರಿಶಿನ ಹಚ್ಚಿ ಮದುವಣಗಿತ್ತಿಯಂತೆ ಅಲಂಕರಿಸಿದರು. ನಂತರ ಸವದತ್ತಿ ಎಲ್ಲಮ್ಮನ ಗುಡ್ಡಕ್ಕೆ ಕರೆದುಕೊಂಡು ಹೋದರು. ಅಲ್ಲಿ ಗದ್ದಿಗೆ ಹಾಕಿ ಅದರ ಸುತ್ತ ಸುರಗಿಯನ್ನು ಸುತ್ತಿ ಕೂರಿಸುತ್ತಾರೆ. ಸುಮಂಗಲಿಯನ್ನಾಗಿ ಅಲಂಕರಿಸುತ್ತಾರೆ.

ಜೋಗತಿ ಪರಂಪರೆಯಲ್ಲಿ ಹಿರಿಯರಿಗೆ ನಾವು ಗುರುವಿನ ಸ್ಥಾನವನ್ನು ಕೊಟ್ಟಿದ್ದೇವೆ. ಅವರು ನಮಗೆ ದೀಕ್ಷೆ ನೀಡುವ ಮುಂದಾಳತ್ವ ಅಥವಾ ಪೌರೋಹಿತ್ಯ ವಹಿಸುತ್ತಾರೆ. ಅವರೇ ಕೊರಳಿಗೆ ಮುತ್ತು ಕಟ್ಟುತ್ತಾರೆ. ಆ ಪ್ರಕ್ರಿಯೆಯನ್ನೇ ‘ಜೋಗತಿ ದೀಕ್ಷೆ’ ಎಂದು ಕರೆಯುತ್ತೇವೆ. ಆ ಸಂದರ್ಭದಲ್ಲಿ ಅವರು ಹಸಿದವರಿಗೆ ಅನ್ನ ಕೊಡಬೇಕು. ಬಿಸಿಲಲ್ಲಿ ಇದ್ದವರನ್ನು ನೆರಳಿಗೆ ಕರೆಯಬೇಕು. ಶ್ರಮವಹಿಸಿ ಬದುಕಬೇಕು. ಯಾರಿಗೂ ಕೇಡು ಬಯಸಬಾರದು. ಎಲ್ಲರನ್ನೂ ಸಮಾನರಾಗಿ ಕಾಣಬೇಕು ಎಂಬ ಹಿತೋಪದೇಶ ಮಾಡುತ್ತಾರೆ.

ನನಗೆ ಮುತ್ತು ಕಟ್ಟಿದವರು ಜೋಗತಿ ಬಂದಮ್ಮ, ಅವರು ಬಳ್ಳಾರಿ ಜಿಲ್ಲೆ ಕುರುಗೋಡು ಮೂಲದವರು. ಜೋಗತಿ ಪರಂಪರೆಯಲ್ಲಿ ಜೋಗಮ್ಮ (ಮಹಿಳೆ), ಜೋಗಪ್ಪ (ಪುರುಷ) ಮತ್ತು ಟ್ರಾನ್ಸ್‌ಜೆಂಡರ್ ಜೋಗತಿ ಎಂಬ ಮೂರು ಬಗೆಯ ಜನ ಇರುತ್ತಾರೆ. ಇವರನ್ನು ‘ದೇವರು ಹೊತ್ತವರು’ ಎಂದೂ ಜನಪದರು ಕರೆಯುತ್ತಾರೆ.

**◆ ದೇವರನ್ನು ಹೊತ್ತ ಆ ದಿನಗಳು ಹೇಗಿದ್ದವು?**

ಧಾರ್ಮಿಕ ವಿಧಿ ವಿಧಾನಗಳ ಪ್ರಕಾರ ಅದೆಲ್ಲ ನಡೆಯಿತು. ಜೋಗತಿ ತನ್ನ ಸಂಪ್ರದಾಯಕ್ಕೆ ಬದ್ಧಳಾಗಿ ಇರಬೇಕು. ಅದನ್ನು ನಾವು ಹೊರಗಡೆ ತೋರಿಸಿಕೊಳ್ಳದಿದ್ದರೂ ನಮ್ಮ ಪಾಡಿಗೆ ನಾವು ಪಾಲಿಸಬೇಕು. ನಮ್ಮ ಧಾರ್ಮಿಕ ಆಚರಣೆಯನ್ನು ವೈಯಕ್ತಿಕ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಮುತ್ತು ಕಟ್ಟಿಸಿಕೊಂಡ ಮೊದಲ ರಾತ್ರಿ ನಾನು ತುಂಬ ಅತ್ತಿದ್ದೇನೆ. ನನ್ನ ಕುತ್ತಿಗೆಯಲ್ಲಿ ಇದ್ದ ಮುತ್ತು, ಕೈಯಲ್ಲಿ ಇದ್ದ ಬಳೆಗಳನ್ನು ನೋಡಿಕೊಂಡು ನಿರಂತರ ಕಣ್ಣೀರು ಸುರಿಸಿದ್ದೇನೆ. ಕನ್ನಡಿಯಲ್ಲಿ ಮತ್ತೆ ಮತ್ತೆ ನನ್ನನ್ನು ನಾನು ನೋಡಿಕೊಂಡು ಒಂದೇ ದಿನದಲ್ಲಿ ಬದಲಾದ ನನ್ನ ಜೀವನ ಸಂಕ್ರಾಂತಿಗೆ ಖುಷಿಪಟ್ಟು ಸಂಭ್ರಮಿಸಿದ್ದೇನೆ. ನಿರಂತರ ಸಾಗರದಲ್ಲಿ ಏಳುವ ತೆರೆಯಂತೆ ನನ್ನ ತಲೆಯಲ್ಲಿ ಹಲವು ಪ್ರಶ್ನೆಗಳು ಬಂದುಹೋಗುತ್ತಿದ್ದವು. ಹೊರ ಜಗತ್ತಿನಲ್ಲಿ ಪುರುಷ ನನ್ನನ್ನು ಹೇಗೆ ನೋಡುತ್ತಾನೋ? ಶಂಕೆಯ ಕಣ್ಣುಗಳು ಸುಳಿದಾಡುವ ಸಮಾಜದಲ್ಲಿ ನಾನು ಹೇಗೆ ಬದುಕಬೇಕು ಎನ್ನುವ ಯೋಚನೆ ಮಿಂಚಿನಂತೆ ಬರುತ್ತಿತ್ತು.

**◆ ಸಿನಿಮಾ–ಸಾಹಿತ್ಯದಲ್ಲಿ ಪ್ರಣಯ ಪ್ರಸಂಗ ಎದುರಾದಾಗ ನಿಮ್ಮ ಮನೋವ್ಯಾಪಾರ ಹೇಗಿರುತ್ತಿತ್ತು?**

ಹದಿಹರೆಯದಲ್ಲಿ ಶೃಂಗಾರ ಸನ್ನಿವೇಶಕ್ಕೆ ನನ್ನಲ್ಲಿಯೂ ಸಹಜ ಸ್ಪಂದನೆ ವ್ಯಕ್ತವಾಗುತ್ತಿತ್ತು.



ಪ್ರಣಯ ಪ್ರಸಂಗದಲ್ಲಿ ಮಾನಸಿಕವಾಗಿ ಅದರೊಳಗೆ ನಾನೂ ಬೆರೆತಿರುತ್ತಿದ್ದೆ. ಆ ದೃಶ್ಯದಲ್ಲಿ ಮಹಿಳೆಯ ಸ್ಥಾನದಲ್ಲಿ ನಿಂತು ನಾನೂ ಹಾಗಿರಬೇಕಿತ್ತಲ್ಲ? ಯಾವಾಗ ನಾನು ಹಾಗೆ ಆಗುತ್ತೇನೆ ಎಂದು ಯೋಚಿಸುತ್ತಿದ್ದೆ. ಅಂತಹ ದೃಶ್ಯಗಳು ನನ್ನನ್ನು ದೀರ್ಘ ಸಮಯ ಕಾಡುತ್ತಿದ್ದವು. ಆ ಸನ್ನಿವೇಶಗಳಲ್ಲಿ ಹೆಣ್ಣಾಗಿ ನನ್ನನ್ನು ನಾನು ಕಾಣುತ್ತಿದ್ದೆ.

**◆ ಲಿಂಗ ಬದಲಾವಣೆ ಸಂದರ್ಭದಲ್ಲಿ ದೈಹಿಕ ಮತ್ತು ಮಾನಸಿಕ ಆರೋಗ್ಯ ಪರಿಸ್ಥಿತಿ ಹೇಗಿತ್ತು?**

ಯೌವನದಲ್ಲಿ ಇರುವ ನನಗೆ ರೋಗ ನಿರೋಧಕ ಶಕ್ತಿ ಚೆನ್ನಾಗಿಯೇ ಇದೆ. ಬದುಕನ್ನು ಎದುರಿಸುವ ಧೈರ್ಯವೂ ಇದೆ. ಸಮಸ್ಯೆಯನ್ನು ಎದುರು ಹಾಕಿಕೊಂಡಾಗಲೇ ನಾವು ಏನು ಆಗಬೇಕು ಎಂದುಕೊಳ್ಳುತ್ತೇವೋ ಅದಾಗುತ್ತೇವೆ. ನನ್ನ ಇಚ್ಛೆಯಂತೆ ಲಿಂಗಾಂತರ ಹೊಂದಿದ್ದೇನೆ. ನನಗೆ ಯಾವ ರೀತಿಯ ದೈಹಿಕ ಮತ್ತು ಮಾನಸಿಕ ಸಮಸ್ಯೆಯನ್ನೂ ಅದು ಉಂಟುಮಾಡಲಿಲ್ಲ.

**◆ ಎಲ್ಲಮ್ಮನ ಪದ ಹಾಡುಗಾರಿಕೆಯ ಕಲೆಯನ್ನು ಹೇಗೆ ಅಭ್ಯಾಸ ಮಾಡಿದಿರಿ?**

ಮೂಲತಃ ಅದು ಜನಪದ ಕಲೆ. ಕೊಪ್ಪಳ ಜಿಲ್ಲೆಯ ಹುಲಿಗಿ (ಮುನಿರಾಬಾದ್) ಎಂಬಲ್ಲಿ ಹುಲಿಗಿ ದೇವಸ್ಥಾನ ಇದೆ. ಅಲ್ಲಿಗೆ ಆಗಾಗ ಹೋಗ್ತಾ ಇದ್ದೆ. ಅಲ್ಲಿ ಜೋಗತಿಯರ ಹಾಡುಗಾರಿಕೆ–ನೃತ್ಯ ನೋಡಿ, ಕೇಳಿ ಸ್ವಯಂ ಪ್ರಯತ್ನದಿಂದ ಜೋಗತಿ ಪದಗಳನ್ನು ಕಲಿತಿದ್ದೇನೆ. ಏಕಲವ್ಯನಂತೆ ಅಭ್ಯಾಸ ಮಾಡಿದ್ದೇನೆ. ಅಲ್ಲದೆ, ಚೌಡಕಿ ನುಡಿಸುತ್ತೇನೆ. ಜೋಗತಿಯರಿಗೆ ಇರಬೇಕಾದ ಮೂಲ ವಿದ್ಯೆಯನ್ನು ಅರಗಿಸಿಕೊಂಡಿದ್ದೇನೆ ಎಂದು ನಾನು ಭಾವಿಸಿದ್ದೇನೆ. ಎಲ್ಲಮ್ಮ ದೇವಿಯ ಕಥೆಯನ್ನು ಹತ್ತಾರು ಕಡೆ ನಡೆಸಿಕೊಟ್ಟಿದ್ದೇನೆ. ನನ್ನ ಕಾರ್ಯಕ್ರಮಕ್ಕೆ ನೆರವಾಗುತ್ತಿದ್ದ ಸಹ ಕಲಾವಿದೆ ತೀರಿಕೊಂಡಿದ್ದರಿಂದ ಈಗ ಸ್ವಲ್ಪ ತೊಂದರೆಯಾಗಿದೆ.

**◆ ಮುಂದಿನ ಜೀವನದ ಕಲ್ಪನೆ ಹೇಗಿದೆ?**

ಜೋಗತಿ ಪರಂಪರೆ ಕಲಿಯುವ ಇಬ್ಬರು ಶಿಷ್ಯರು ಇದ್ದಾರೆ. ನಾನು ಕಲಿತ ಕಲೆಯನ್ನು ಅಂತಹವರಿಗೆ ಕಲಿಸುವ ಯೋಚನೆ ಇದೆ. ಜೋಗತಿ ಸಂಸ್ಕೃತಿಯನ್ನು ಮುನ್ನಡೆಸಬೇಕು. ಇದು ನಶಿಸದಂತೆ ಜೋಪಾನ ಮಾಡಿಕೊಳ್ಳಬೇಕು. ಆ ಮೂಲಕ ಜೋಗತಿ ಕಲೆ ಮತ್ತು ಸಾಹಿತ್ಯವನ್ನು ಮುನ್ನೆಲೆಗೆ ತರಬೇಕು. ಎಲ್ಲಮ್ಮನ ಕಥೆ ಹೇಳುವುದನ್ನು ಮುಂದುವರಿಸುತ್ತೇನೆ.

ಪಿಎಚ್.ಡಿ. ಮಾಡಬೇಕು, ನನ್ನ ವಿದ್ಯಾರ್ಥಿಗಳನ್ನು ಬೌದ್ಧಿಕವಾಗಿ ಬೆಳೆಸಬೇಕು ಎನ್ನುವ ವಿಚಾರ ಇದೆ. ಹಳೆಗನ್ನಡ ಮತ್ತು ನಡುಗನ್ನಡ ಸಾಹಿತ್ಯ, ಭಾಷಾ ವಿಜ್ಞಾನ, ಜಾನಪದ ಅಧ್ಯಯನದಲ್ಲಿ ನನಗೆ ಆಸಕ್ತಿ ಹೆಚ್ಚಿದೆ. ಕವಿತೆಯನ್ನು ಬರೆಯುವ ಹವ್ಯಾಸ ಕೂಡ ಇದೆ, ಅದನ್ನು ಮುಂದುವರಿಸಬೇಕು. ಮುಂದಿನ ದಿನಗಳಲ್ಲಿ ಲೇಖನಗಳನ್ನು ಬರೆಯಬೇಕು ಎಂದುಕೊಂಡಿದ್ದೇನೆ. ಜಾನಪದ ಕ್ಷೇತ್ರದಲ್ಲಿ ಅಧ್ಯಯನ ಮತ್ತು ಸಂಗ್ರಹ ಕಾರ್ಯದಲ್ಲಿ ತೊಡಗಬೇಕು ಎನ್ನುವ ಗುರಿ ಇದೆ.

ಪ್ರತಿಕ್ರಿಯಿಸಿ: feedback@sudha.co.in